ವೈಯಕ್ತಿಕ ವಿವರಣೆ

ಹಿರಿಯೂರು ತಹಶೀಲ್ದಾರರು ಶಾಸಕರಾದ ಶ್ರೀ ರಾಮಯ್ಯನವರ ಮೇಲೆ ಶ್ರೀ ಎಚ್. ಏಕಾಂತಯ್ಯನವರು ಪ್ರೇರೇಪಣೆ ಮಾಡಿದಂದರಿಂದ ದೂರು ನೀಡಿದರೆಂಬ ಆರೋಪದ ಬಗ್ಗೆ

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷರೇ, ತಾರೀಖು ೨೭-೮-೬೬ ರಂದು, ಹಿರಿಯೂರು ಶಾಸಕರಾದ ಶ್ರೀ ಆರ್. ರಾಮಯ್ಯನವರ ವಿರುದ್ಧ ಹಿರಿಯೂರಿನ ಪ್ರೊಬೇಷನರಿ ತಹಶೀಲ್ದಾರ್‌ರವರು ನೀಡಿದ ದೂರಿನ ಸಂಬಂಧದಲ್ಲಿ ವಿರೋಧಪಕ್ಷದ ಮಾಜಿ ನಾಯಕರುಗಳಾದ ಶ್ರೀ ಎಸ್. ಬಂಗಾರಪ್ಪ, ಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರು ಹಾಗೂ ಸದಸ್ಯರಾದ ಶ್ರೀ ಆರ್. ಎನ್. ನಾಯ್ಕರವರು ನಿಯಮ ೩೫೪ರ ಪ್ರಕಾರ ನೀಡಿದ ಸೂಚನಾ ಪತ್ರದಲ್ಲಿ ಸದರಿಯ ವಿಷಯ ಪ್ರಸ್ತಾಪ ಮಾಡುತ್ತಾ ಈ ಕೆಳಗಿನಂತೆ ನನ್ನ ಮೇಲೆ ಆರೋಪವನ್ನು ಮಾಡಿದ್ದಾರೆ.

> ''ಈ ಮಧ್ಯ ಚಿತ್ರದುರ್ಗ ಶಾಸಕ ಎಚ್. ಏಕಾಂತಯ್ಯ ಈ ಘಟನೆಯನ್ನು ಬೆಳೆಸಿ ಅವರನ್ನು ಪ್ರೇರೇಪಿಸಿ ಕಂಪ್ಲೇಂಟ್ ಕೊಡುವಂತೆ ಮಾಡಿದ್ದಾರೆ.''

ಈ ಮೇಲ್ಕಂಡ ರೀತಿಯಲ್ಲಿ ಆರೋಪ ಮಾಡಿರುವುದು ಸತ್ಯಕ್ಕೆ ದೂರವಾದ ಸಂಗತಿ ಹಾಗೂ ದುರುದ್ದೇಶದಿಂದ ಕೂಡಿರುತ್ತದೆ. ಯಾವುದೇ ರಾಜಕೀಯ ವ್ಯಕ್ತಿಯನ್ನು ರಾಜಕೀಯವಾಗಿ ಎದುರಿಸಲಾಗದೆ, ಸದರಿ ವ್ಯಕ್ತಿಯ ಚಾರಿತ್ರ್ಯಕ್ಕೆ ಕಳಂದು ತರುವಂತಹ ರೀತಿಯಲ್ಲಿ ಯಾವುದೇ ಘಟನೆಯನ್ನು ತಿರುಗಿಸುವ ಇಲ್ಲವೆ ಬೆಳೆಸುವ ಪ್ರವೃತ್ತಿಯು ಪರಂಪರೆಗೆ ನಾನು ಸೇರಿದವನಲ್ಲ ಎಂದು ತಿಳಿಸಲು ಬಯಸುತ್ತೇನೆ. ಮಾನ್ಯ ಸದಸ್ಯರು ಮತ್ತೊಬ್ಬ ಸದಸ್ಯರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡುವಂತಹ ರೀತಿಯಲ್ಲಿ ಯಾವುದೇ ವಿಷಯಗಳನ್ನು ಪ್ರಸ್ತಾಪಿಸುವಾಗ ನಿಜ ಸ್ಥಿತಿಯ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆಯುವುದೇ ಕಾರ್ಯವು ಅವಶ್ಯಕ. ಅಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಘಟನೆ ಬಗ್ಗೆ ಮಾನ್ಯ ಸದಸ್ಯರುಗಳು ಸರಿಯಾದ ಮಾಹಿತಿಯನ್ನು ಪಡೆಯದೇ ನನ್ನ ಹೆಸರನ್ನು ಪ್ರಸ್ತಾಪಿಸಿರುವುದು ಅತ್ಯಂತ ದುರದೃಷ್ಟಕರ. ಈ ರೀತಿಯ ಪ್ರಸ್ತಾಪ ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಅನಿವಾರ್ಯವಾಗಿ ಹೇಳಬೇಕಾದುದಕ್ಕೆ ವಿಷಾದಿಸುತ್ತೇನೆ. ಇನ್ನು ಮುಂದಾದರೂ ಇಂತಹ ಆರೋಪಗಳನ್ನು ಮಾಡುವಾಗ ಮಾನ್ಯ ಸದಸ್ಯರು ನಿಜ ಸ್ಥಿತಿಯ ಬಗ್ಗೆ ಸರಿಯಾದ ಮಾಹಿತಿ ಪಡೆದು ವಿಷಯ ಪ್ರಸ್ತಾಪಿಸುತ್ತೀರೆಂದು ಆಶಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ಸಭೆಯನ್ನು ಅನಿರ್ದಿಷ್ಟಕಾಲದವರೆಗೆ ಈಗ ಮುಂದೂಡಿದ್ದೇನೆ.

ಸಭೆಯನ್ನು ದಿನಾಂಕ ೨೯-೮-೬೬ರಂದು ಸಂಜೆ ೭-೫೦ಕ್ಕೆ ಅನಿರ್ದಿಷ್ಟಕಾಲದ ವರೆಗೆ ಮುಂದೂಡಲಾಯಿತು.

---

† ಈ ಚಿಹ್ನೆ ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.